**O.S. No.604/2018. DW-2.**

**ದಿನಾಂಕಃ21.06.2024 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ** ವಾದಿಯರ ಪರ ಶ್ರೀ ಡಿ ಸಿ ವಕೀಲರಿಂದಃ-

ನಾನು ಇಂಟರ್ ಮಿಡಿಯೇಟ್ (ಎಸ್ ಎಸ್ ಎಲ್ ಸಿ) ಮುಗಿಸಿ ಬಿ ಎಸ್ ಸಿ ಗೆ ಸೇರಿದ್ದೆ, ನಂತರ ವಿದ್ಯಾಭ್ಯಾಸ ಬಿಟ್ಟಿರುತ್ತೇನೆ. ನಾನು ಹುಟ್ಟಿನಿಂದ ಜೋಡಿಹೋಚಿಹಳ್ಳಿಯಲ್ಲಿ ವಾಸವಿದ್ದೇನೆ. ನನಗೆ ಪ್ರತಿವಾದಿ ಮತ್ತು ಅವರ ಮಕ್ಕಳ ಪರಿಚಯವಿದೆ, ನಾನು ಮತ್ತು ಅವರು ವಿಶ್ವಾಸದಿಂದ ಇದ್ದೇವೆ ಎಂದರೆ ಸರಿ. ವಾದಿಯು ಈ ದಾವೆಯಲ್ಲಿ ಏನು ಪರಿಹಾರ ಕೋರಿದ್ದಾರೆ ಎಂದು ನನಗೆ ಗೊತ್ತಿಲ್ಲ. ನಾನು ಸಲ್ಲಿಸಿರುವ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿನ ಮಾಹಿತಿಯು ನನಗೆ ಗೊತ್ತಿರುತ್ತದೆ. ನನ್ನ ಪ್ರಮಾಣ ಪತ್ರದಲ್ಲಿ ಸರ್ವೆ ನಂ.221/4, 221/1 ರ ಜಮೀನಿನ ಬಗ್ಗೆ ಬರೆಸಿರುತ್ತೇನೆ.

ಈ ಎರಡೂ ಸರ್ವೆ ನಂಬರುಗಳಿಗೆ ಸಂಬಂಧಿಸಿದ ಪತ್ರಗಳಿಗೆ ನಾನು ಸಹಿ ಮಾಡಿರುವುದಿಲ್ಲ, ನನ್ನ ತಮ್ಮ ಹೆಚ್ ಕೆ ನಾಗರಾಜು ಮಾಡಿರುತ್ತಾನೆ. ಹೆಚ್ ಕೆ ನಾಗರಾಜು ನನ್ನ ತಮ್ಮ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ನನ್ನ ಊರಿನಲ್ಲಿ ನಾಗರಾಜ ಅಥವಾ ಹೆಚ್ ಕೆ ನಾಗರಾಜು ಎಂಬುವವರು ಬಹಳ ಜನ ಇದ್ದಾರೆ ಎಂದರೆ ಸಾಕ್ಷಿಯು ನಾಗರಾಜು ಎಂಬುವವರು ಇದ್ದಾರೆ ಆದರೆ ಹೆಚ್ ಕೆ ನಾಗರಾಜ್ ಎಂಬುವವರು ಇಲ್ಲ ಎಂದು ನುಡಿಯುತ್ತಾರೆ. ಸದರಿ ಹೆಚ್ ಕೆ ನಾಗರಾಜು ರವರಿಗೆ ಹೆಂಡತಿ, ಮಕ್ಕಳು ಇದ್ದಾರೆ. ನಿಡಿ 1A(C) ಸಹಿಯು ಹೆಚ್ ಕೆ ನಾಗರಾಜು ರವರದ್ದಲ್ಲ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಿಡಿ 1A(C) ಸಹಿ ಇರುವ ದಾಖಲೆಯು ಯಾವ ಸರ್ವೆ ನಂಬರಿನ ಜಮೀನಿಗೆ ಸಂಬಂಧಪಟ್ಟದ್ದು ಎಂದರೆ ನಾನು ದಾಖಲೆ ನೋಡಿ ಹೇಳಬೇಕಾಗುತ್ತದೆ. ನಿಡಿ1A ರ

ದಾಖಲೆಯು ಹೋಚಿಹಳ್ಳಿಯ ಸರ್ವೆ ನಂ.268/1ಕ್ಕೆ ಸಂಬಂಧಿಸಿದ್ದು ಎಂದರೆ ಇರಬಹುದು. ಹೆಚ್ ಕೆ ನಾಗರಾಜು ರವರ ಸಹಿ ಇರುವ ಇತರ ಯಾವುದಾದರೂ ದಾಖಲೆಗಳನ್ನು ಮಾದರಿ ಸಹಿಗಾಗಿ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಸರ್ವೆ ನಂ.221/4, 221/1 ರ ಜಮೀನಿಗೆ ಸಂಬಂಧಪಟ್ಟಂತೆ ಯಾವುದೇ ವ್ಯವಹಾರವಾಗಿರುವುದಿಲ್ಲ, ಪ್ರತಿವಾದಿಯು ನನ್ನ ಸ್ನೇಹಿತರಾದ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಪ್ರಮಾಣಪತ್ರ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ರೂ.75 ಸಾವಿರ ಹಣವನ್ನು ಪ್ರತಿವಾದಿಗಳು ಪಾವತಿಸಿರುತ್ತೇನೆ ಎಂದು ಸುಳ್ಳು ನಮೂದು ಮಾಡಿಸಿರುತ್ತೇನೆ ಎಂದರೆ ಸರಿಯಲ್ಲ.

ಪ್ರತಿವಾದಿಗಳು ಹಾಜರುಪಡಿಸಿರುವ ಸುಳ್ಳು ದಾಖಲೆಗಳನ್ನು ಸೃಷ್ಟಿಸಲು ನಾನು ಕೂಡ ಷರಿಕ್ಕಾಗಿರುತ್ತೇನೆ ಎಂದರೆ ಸರಿಯಲ್ಲ. ಅವರು ಹಾಜರುಪಡಿಸಿರುವ ದಾಖಲೆಗಳಲ್ಲಿ ನನ್ನ ಅಥಾವ ನನ್ನ ಕುಟುಂಬದವರ ಸಹಿ ಇರುವುದಿಲ್ಲ ಎಂದರೆ ಸಾಕ್ಷಿಯು ನನ್ನ ತಮ್ಮನ ಸಹಿ ಇದೆ.

ನಿಡಿ 2 ದಾಖಲೆಯನ್ನು ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ, ಸಾಕ್ಷಿಯು ನಿಡಿ 2 ನ್ನು ಸೈಯದ್ ಅನ್ವರ್ ರವರು ಹೇಳಿದಂತೆ ನಾನೇ ಬರವಣಿಗೆ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ನಿಡಿ 2 ದಾಖಲೆಯನ್ನು ನಾನು ಈಗ ಸೃಷ್ಟಿಸಿ ಪ್ರತಿವಾದಿಗೆ ಸೈಯದ್ ಅನ್ವರ್ ರವರ ಸಹಿ ಮಾಡಿ ನೀಡಿರುತ್ತೇವೆ ಎಂದರೆ ಸರಿಯಲ್ಲ. ನಿ ಡಿ 2 ರಲ್ಲಿ ನನ್ನ ಸಹಿ ಇಲ್ಲ ಎಂದರೆ ನಾನು ಪತ್ರಬರಹಗಾರರನಾಗಿರುವುದಿಲ್ಲ, ಹಾಗಾಗಿ ನಾನು ಸಹಿ ಮಾಡಿರುವುದಿಲ್ಲ. ನಿ ಡಿ 4 ನ್ನು ನಾನೇ ಬರವಣಿಗೆ ಮಾಡಿರುತ್ತೇನೆ. ನಿ ಡಿ 4 ನ್ನು ಈ ದಾವೆ ಹಾಕಿದ ನಂತರ ನಾನು ಸೃಷ್ಟಿ ಮಾಡಿ ಪ್ರತಿವಾದಿಗಳಿಗೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ನಿ ಡಿ 4 ರಲ್ಲಿಯು ಸಹಃ ಸೈಯದ್ ಅನ್ವರ್ ರವರ ಸಹಿಯನ್ನು ನಾವು ಪೋರ್ಜರಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಿ ಡಿ 5 ನ್ನು ನಾನೇ ಬರವಣಿಗೆ ಮಾಡಿರುತ್ತೇನೆ. ನಿ ಡಿ 5 ನ್ನು ಈ ದಾವೆ ಹಾಕಿದ ನಂತರ ನಾನು ಸೃಷ್ಟಿ ಮಾಡಿ ಪ್ರತಿವಾದಿಗಳಿಗೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ನಿ ಡಿ 5 ರಲ್ಲಿಯು ಸಹಃ ಸೈಯದ್ ಅನ್ವರ್ ರವರ ಸಹಿಯನ್ನು

ನಾವು ಫೋರ್ಜರಿ ಮಾಡಿರುತ್ತೇವೆ ಎಂದರೆ ಸರಿಯಲ್ಲ.

ನಿಡಿ 2, 4, 5 ನ್ನು ನಾನೇ ಬರವಣಿಗೆ ಮಾಡಿರುತ್ತೇನೆ ಎಂದು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಹೇಳಿರುವುದಿಲ್ಲ. ದಾವಾ ಆಸ್ತಿಯು ಸೈಯದ್ ಜಾಫರ್ ರವರ ಮಗ ಸೈಯ್‌ದ್ ಅನ್ವರ್ ರವರಿಗೆ ಸೇರಿದ್ದಾಗಿದ್ದು ಅದನ್ನು ಪ್ರತಿವಾದಿಗಳಿಗೆ ಮಾಡಿಕೊಡುವ ಉದ್ದೇಶದಿಂದ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನಿಡಿ 1A(b) ಸಹಿಯು ಸೈಯದ್ ಅನ್ವರ್ ರವರ ಸಹಿಯಾಗಿರುತ್ತದೆ ಎಂದರೆ ಸರಿ. ನಿಡಿ 1A(b) ಸಹಿಯು ಮತ್ತು ನಿಡಿ 4, 5 ರಲ್ಲಿರುವ ಸಹಿ ಬೇರೆ ಬೇರೆ ಎಂದರೆ ಸರಿಯಲ್ಲ. ನಿಡಿ 1A, 2, 4, 5 ಈ ದಾಖಲೆಗಳಿಗೂ ಮತ್ತು ಸೈಯ್‌ದ್ ಅನ್ವರ್ ರವರಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ದಾಖಲೆಯನ್ನು ಆ ಸಮಯದಲ್ಲಿ ಬರವಣಿಗೆ ಮಾಡಿಲ್ಲ, ಈಗ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ದಾವೆಯ ಬಗ್ಗೆ ಯಾವುದೇ ಮಾಹಿತಿಯು ನನಗೆ ಗೊತ್ತಿರದಿದ್ದರೂ ಸಹಃ ಪ್ರತಿವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಒ,

sd/-

ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.